# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಆಯುಕ್ತರು/ಪಿ.ಎಸ್.ಆರ್/ಜಿ/5235/2015-16

ಆಯುಕ್ತರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು, ದಿನಾಂಕ: 07-08-2015

## ಸುತ್ತೋಲೆ

ವಿಷಯ:- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತ/ಕಾನೂನು ಬಾಹಿರ ಕಟ್ಟಡಗಳ ನಿರ್ಮಾಣ ತಡೆಯುವ ಬಗ್ಗೆ.

ಉಲ್ಲೇಖ:- 1. ಆಯುಕ್ತರ ಸುತ್ತೋಲೆ ಸಂಖ್ಯೆ:ಬಿ12(6)ಪಿಆರ್/ 56 /2010-11 ದಿನಾಂಕ:07/07/2010.
2. ಆಯುಕ್ತರ ಕಛೇರಿ ಆದೇಶ ಸಂಖ್ಯೆ:ಬಿ12(1)ಪಿಆರ್/223/2010-11 ದಿನಾಂಕ:29/06/2015
3. ರಿಟ್ ಮೇಲ್ಮನವಿ ಸಂಖ್ಯೆ:1800/2008ರ ತೀರ್ಮ ದಿನಾಂಕ:01/12/2008.

* * * * *

1. ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತ ಹಾಗೂ ಕಟ್ಟಡ ಉಪವಿಧಿ ಹಾಗೂ ನಕ್ಷೆ ಮಂಜೂರಾತಿ ಉಲ್ಲಂಘಿಸಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ಮಾಲೀಕರ ವಿರುದ್ಧ ಕೆಎಂಸಿ ಕಾಯ್ದೆ ಕಲಂ 321 (1) (2) ಮತ್ತು (3)ರಡಿಯಲ್ಲಿ ಕ್ರಮ ಜರುಗಿಸುತ್ತಿರುವುದು ಸರಿಯಷ್ಟೆ. ಮುಂದುವರೆದು ಸದರಿ ಕ್ರಮದ ವಿರುದ್ಧ ಕಟ್ಟಡಗಳ ಮಾಲೀಕರು ಮಾನ್ಯ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸಿ ತಡೆಯಾಜ್ಞೆ ಪಡೆದು ಕಟ್ಟಡ ನಿರ್ಮಾಣ ಮುಂದುವರೆಸುತ್ತಿರುವುದು ಗಮನಾರ್ಹ ಸಂಗತಿಯಾಗಿರುತ್ತದೆ.

2. ಪಾಲಿಕೆಯು ಅನಧಿಕೃತ ಹಾಗೂ ನಕ್ಷೆ ಮಂಜೂರಾತಿ ಉಲ್ಲಂಘಿಸಿದ ಕಟ್ಟಡಗಳ ವಿರುದ್ಧ ಸಕಾಲದಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸಲು ಹಾಗೂ ಅನಧಿಕೃತ ಕಟ್ಟಡ ನಿರ್ಮಾಣಗಳನ್ನು ತಡೆಯುವ/ನಿಯಂತ್ರಿಸುವ ನಿಟ್ಟಿನಲ್ಲಿ ಹಲವಾರು ಸುತ್ತೋಲೆಗಳು ಹಾಗೂ ಕಛೇರಿ ಆದೇಶಗಳನ್ನು ಉಲ್ಲೇಖ (1) ಮತ್ತು (2)ರಂತೆ ಹೊರಡಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆ. ಅಲ್ಲದೆ ನ್ಯಾಯಾಲಯ ಪ್ರಕರಣಗಳಲ್ಲಿ ಕೂಡಲೇ ಕಂಡಿಕೆವಾರು ಉತ್ತರ ಹಾಗೂ ದಾಖಲೆಗಳನ್ನು ಸಲ್ಲಿಸಿ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ಕ್ರಮವಹಿಸಲು ತಿಳಿಸಲಾಗಿರುತ್ತದೆ.

3. ಪಾಲಿಕೆಯು ಎಲ್ಲಾ ರೀತಿಯಲ್ಲಿಯೂ ಕ್ರಮ ಜರುಗಿಸುತ್ತಿರುವಾಗಲೂ ಕೂಡ ಅನಧಿಕೃತ/ನಕ್ಷೆ ಮಂಜೂರಾತಿ ಉಲ್ಲಂಘನೆ ಕಟ್ಟಡಗಳ ನಿರ್ಮಾಣವನ್ನು ನಿಯಂತ್ರಿಸಲು ಪರಿಣಾಮಕಾರಿಯಾಗಿ ಕ್ರಮಕೈಗೊಳ್ಳಲು ಸಾಧ್ಯವಾಗುತ್ತಿಲ್ಲ.

4. <u>ಈ ಹಿನ್ನೆಲೆಯಲ್ಲಿ ಕೆಳಕಂಡ ಮೂರು ಕ್ರಮಗಳನ್ನು ಇಂತಹ ಎಲ್ಲಾ ಪ್ರಕರಣಗಳಲ್ಲಿ ತೆಗೆದುಕೊಳ್ಳಲು ಉಪ ವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರುಗಳಿಗೆ ಸೂಚಿಸಿದೆ. ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಟ್ಟಡಗಳ ತಳಪಾಯ ತೋಡುವ ಹಂತದಿಂದಲೂ ಕಟ್ಟಡಗಳ ನಿರ್ಮಾಣದ ಬಗ್ಗೆ ಗಮನಹರಿಸಿ ಕಾಲಕಾಲಕ್ಕೆ ಕಟ್ಟಡದ ಹಂತಗಳ ಬಗ್ಗೆ ಕಛೇರಿ ಕಡತದಲ್ಲಿ ನಮೂದಿಸತಕ್ಕದ್ದು.</u>

<u>ಕ್ರಮ 1</u> : ಒಂದು ಪಕ್ಷ ಕಟ್ಟಡ ನಕ್ಷೆ ಮಂಜೂರಾತಿ ಉಲ್ಲಂಘಿಸಿರುವುದು ಕಂಡುಬಂದ ತಕ್ಷಣವೇ ತ್ವರಿತವಾಗಿ ಕೆಎಂಸಿ ಕಾಯ್ದೆ ಕಲಂ 321(1) (2) ಮತ್ತು (3) ಅನುಸಾರ ಕ್ರಮ ಜರುಗಿಸುವುದು. ಈ ಸಂಬಂಧ ಅನುಸರಿಸಬೇಕಾದ ಕಾರ್ಯವಿಧಾನವನ್ನು ಅನುಬಂಧ-1ರಲ್ಲಿ ತಿಳಿಸಿದೆ. ಕಲಂ 321(1)(2)(3)ರಡಿ ನೀಡಬೇಕಾದ ನೋಟೀಸುಗಳ ನಮೂನೆಗಳನ್ನು ಅನುಬಂಧ-2 ರಿಂದ 4ರಲ್ಲಿ ಲಗತ್ತಿಸಿದೆ.

ಸದರಿ ನೋಟೀಸ್‌ಗಳನ್ನು ನಿರ್ಮಾಣದ ಮೇಲೆ ಅಂಟಿಸಿ ಜಾರಿ ಮಾಡುವುದು. ಅದರಲ್ಲಿ ಸದರಿ ನಿರ್ಮಾಣದಲ್ಲಿ ಮಂಜೂರಾತಿ ನಕ್ಷೆ ಉಲ್ಲಂಘಿಸಲಾಗಿದೆ ಹಾಗೂ ಈ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕೆ.ಎಂ.ಸಿ. ಕಾಯ್ದೆ ಕಲಂ ಕಲಂ 321ರ ಪ್ರಕಾರ ಕ್ರಮ ಜರುಗಿಸಲಾಗಿದೆಯೆಂದು ತಿಳಿಸುವುದು.

ಕ್ರಮ 2: ಅಂತಹ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಹಾಗೂ ನೀರು ಮತ್ತು ಒಳಚರಂಡಿ ತಾತ್ಕಾಲಿಕ ಸಂಪರ್ಕಗಳನ್ನು ಕಡಿತಗೊಳಿಸುವಂತೆ/ಶಾಶ್ವತ ಸಂಪರ್ಕ ನೀಡದಂತೆ ಸಂಬಂಧಪಟ್ಟ ಪ್ರಾಧಿಕಾರಗಳಾದ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಹಾಗೂ ಬೆಂಗಳೂರು ನೀರು ಹಾಗೂ ಒಳಚರಂಡಿ ಮಂಡಳಿಗೆ ಪತ್ರ ಬರೆಯತಕ್ಕದ್ದು.

ನಕ್ಷೆ ಮಂಜೂರಾತಿಯನ್ನು ಉಲ್ಲಂಘಿಸಿ/ಅನಧಿಕೃತವಾಗಿ ನಿರ್ಮಿಸಲ್ಪಟ್ಟ ಕಟ್ಟಡಗಳಿಗೆ ಈಗಾಗಲೇ ವಿದ್ಯುತ್ ಸಂಪರ್ಕ ಹಾಗೂ ನೀರು ಮತ್ತು ಒಳಚರಂಡಿ ಸಂಪರ್ಕವನ್ನು ಒದಗಿಸಲು ಕಡ್ಡಾಯವಾಗಿ ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯತಕ್ಕದ್ದು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯವು ರಿಟ್‌ಅರ್ಜಿ ಸಂಖ್ಯೆ:11578/2008ರ ಆದೇಶದಲ್ಲಿ ಉಲ್ಲೇಖಿಸಿದ ಅಂಶಗಳನ್ನು ಎತ್ತಿಡಿಯುತ್ತಾ ಮತ್ತು ರಿಟ್ ಮೇಲ್ಮನವಿ ಸಂಖ್ಯೆ:1800/2008ರ ಪ್ರಕರಣಗಳಲ್ಲಿ **"In the circumstances, this Court is of the opinion, till the case is decided by the Karnataka Appellate Tribunal and till the occupancy certificate is obtained by the 2nd Respondent, the respondent No.3 and 4 shall not provide water and electicity to the 2nd respondent. On production of occupancy certificate by the 2nd respondent, 3rd and 4th respondent shall provide electricity and water connextion to the premises of the 2nd respondent. With the above observation, the writ petition is disposed of."** ಎಂದು ಆದೇಶಿಸಲಾಗಿರುತ್ತದೆ. ಆದುದರಿಂದ ಕಡ್ಡಾಯವಾಗಿ ಸ್ವಾಧೀನಾನುಭವ ಪ್ರಮಾಣಪತ್ರವಿಲ್ಲದೆ ರಸ್ತೆ ಅಗೆತಕ್ಕೆ/ಮೂಲಭೂತ ಸೌಕರ್ಯ ಒದಗಿಸಬಾರದೆಂದು ಆದೇಶಿಸಿದೆ. ಅವರಿಗೆ ಬರೆಯಬೇಕಾದ ಪತ್ರಗಳ ನಮೂನೆ ಅನುಬಂಧ-5ರಲ್ಲಿ ನೀಡಿದೆ.

ಕ್ರಮ 3 : ಅನಧಿಕೃತ ಕಟ್ಟಡ ಹಾಗೂ ನಕ್ಷೆ ಮಂಜೂರಾತಿ ಉಲ್ಲಂಘನೆಯಾಗಿರುವ ಕಟ್ಟಡಗಳ ನಕ್ಷೆ ವಿನ್ಯಾಸಗಾರರು, ಅಭಿಯಂತರರು ಹಾಗೂ ಮೇಲ್ವಿಚಾರಕರ ವಿರುದ್ಧ ಅನುಬಂಧ-IV – ಬಿ.ಬಿ.ಎಂ.ಪಿ. ಕಟ್ಟಡಗಳ ಉಪವಿಧಿಗಳು 2003ರ ಉಪವಿಧಿ 8(i)ರ ಪ್ರಕಾರ ಮಂಜೂರಾತಿ ನಕ್ಷೆ ಉಲ್ಲಂಘಿಸಿ ನಿರ್ಮಾಣ ಮಾಡದಿರಲು ಅವರೂ ಜವಾಬ್ದಾರರಾಗಿರುತ್ತಾರೆ. ಆದ್ದರಿಂದ ಕಟ್ಟಡದ ವಿನ್ಯಾಸಗಾರರಿಗೆ, ಅಭಿಯಂತರರಿಗೆ ಹಾಗೂ ಮೇಲ್ವಿಚಾರಕರಿಗೆ ಉಪವಿಧಿ 7.1ರಡಿ ಪ್ರಥಮವಾಗಿ ತಿಳುವಳಿಕೆ ನೋಟೀಸು (ನಮೂನೆ ಅನುಬಂಧ-6ರಂತೆ) ನೀಡುವುದು. ಎರಡನೆಯದಾಗಿ ಅವರುಗಳಿಗೆ ಎಚ್ಚರಿಕೆ ನೀಡುವುದು (ನಮೂನೆ ಅನುಬಂಧ-7ರಲ್ಲಿದ್ದಂತೆ) ಹಾಗೂ ಮೂರನೆಯದಾಗಿ ಅವರ ನೋಂದಣಿಯನ್ನು ರದ್ದುಪಡಿಸಲು ಕ್ರಮಕೈಗೊಳ್ಳತಕ್ಕದ್ದು (ನಮೂನೆ ಅನುಬಂಧ-8ರಲ್ಲಿದ್ದಂತೆ).

5. ಮೇಲಿನಂತೆ 3 ಕ್ರಮಗಳನ್ನು ಜರುಗಿಸಲು ಎಲ್ಲಾ ವಾರ್ಡ್‌ಗಳ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಿಗೆ ಸೂಚಿಸಿದೆ. ಮೇಲಿನಂತೆ ಕ್ರಮ ಜರುಗಿಸಿರುವುದನ್ನು ಸಂಬಂಧಪಟ್ಟ ಎಲ್ಲಾ ಮೇಲಾಧಿಕಾರಿಳು ಮೇಲ್ವಿಚಾರಣೆ ಮಾಡುವುದು.

ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು: ಮಾನ್ಯ ಆಡಳಿತಗಾರರ ಅವಗಾಹನೆಗೆ ಸಲ್ಲಿಸಿದೆ.

: ವಿಶೇಷ ಆಯುಕ್ತರು (ಯೋಜನೆ)/ಅಪರ ಆಯುಕ್ತರು (ಆಡಳಿತ)ರವರಿಗೆ ಕಳುಹಿಸಿದೆ.

: ಅಪರ/ಜಂಟಿ ಆಯುಕ್ತರು (ಪಶ್ಚಿಮ/ದಕ್ಷಿಣ/ಪೂರ್ವ/ಯಲಹಂಕ/ದಾಸರಹಳ್ಳಿ/ಮಹದೇವಪುರ/ರಾಜರಾಜೇಶ್ವರಿನಗರ/ಬೊಮ್ಮನಹಳ್ಳಿ ವಲಯ) ರವರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

: ಪ್ರಧಾನ ಅಭಿಯಂತರರು ಹಾಗೂ ಎಲ್ಲಾ ವಲಯದ ಮುಖ್ಯ ಅಭಿಯಂತರರಿಗೆ ಕಳುಹಿಸುತ್ತಾ ಅಧೀನ ಕಾರ್ಯಪಾಲಕ ಅಭಿಯಂತರರು/ಸಹಾಯಕ ಕಾರ್ಯಪಾಲಕ ಅಭಿಯಂತರರು/ಸಹಾಯಕ/ಕಿರಿಯ ಅಭಿಯಂತರರಿಗೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಕ್ರಮವಹಿಸುವುದು.

: ಉಪ ಆಯುಕ್ತರು (ಕಂದಾಯ) ರವರ ಮಾಹಿತಿಗಾಗಿ ಸಲ್ಲಿಸಿದೆ.

: ಪಾಲಿಕೆಯ ಎಲ್ಲಾ ವಕೀಲರಿಗೆ ಕಳುಹಿಸುತ್ತಾ ಪ್ರಕರಣಗಳಲ್ಲಿ ಕೂಡಲೇ ಸುತ್ತೋಲೆಯ ವಿಷಯದಲ್ಲಿ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

: ಕಾನೂನು ಕೋಶದ ಮುಖ್ಯಸ್ಥರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

: ಕಛೇರಿ ಪ್ರತಿ.

ಅನುಬಂಧ–01

**ಕೆಎಂಸಿ ಕಾಯ್ದೆ ಕಲಂ 321ರ ಅಡಿಯಲ್ಲಿ ಕ್ರಮಕೈಗೊಳ್ಳಲು ಅನುಸರಿಸಬೇಕಾದ ಅವಶ್ಯಕ ಕಾರ್ಯವಿಧಾನ**

1. ಸಂಬಂಧಪಟ್ಟ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಕೆಎಂಸಿ ಕಾಯ್ದೆಯಂತೆ ಆಯುಕ್ತರಲ್ಲಿ ನಿಹಿತವಾದ ಅಧಿಕಾರವನ್ನು ಕಲಂ 66 ಮತ್ತು 67ರಡಿಯಲ್ಲಿ ಅಧಿಕಾರ ಪ್ರತ್ಯಾಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವುದಾಗಿ ಕಛೇರಿ ಟಿಪ್ಪಣಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸತಕ್ಕದ್ದು. (ಕಟ್ಟಡ ಮಂಜೂರಾತಿ ನಕ್ಷೆಯು ಕಛೇರಿ ಕಡತದಲ್ಲಿದ್ದಲ್ಲಿ ಪರಿಶೀಲಿಸುವುದು ಇಲ್ಲವಾದಲ್ಲಿ ಕೆಎಂಸಿ ಕಾಯ್ದೆ ಕಲಂ 308ರಡಿ ನೋಟೀಸು ನೀಡಿ ಕಟ್ಟಡ ಮಾಲೀಕರಿಂದ ದಾಖಲೆಗಳು ಹಾಗೂ ನಕ್ಷೆ ಮಂಜೂರಾತಿ ಪ್ರತಿಯನ್ನು ಪಡೆಯತಕ್ಕದ್ದು.)
   ಸ್ವತ್ತಿನ ಮಾಲೀಕರು ಕಟ್ಟಡ ಕಾಮಗಾರಿ ಪ್ರಾರಂಭಿಸಿ ತಳಪಾಯ/ಕಂಬ ಅಥವಾ ಗೋಡೆಯ ಫುಟಿಂಗ್ ಹಾಕಿದ ಹಂತದಲ್ಲಿ ಕಟ್ಟಡ ಉಪವಿಧಿ ಷೆಡ್ಯೂಲ್ 6ರ ನಮೂನೆಯಲ್ಲಿ ಸಂಬಂದಪಟ್ಟ ಕಾಮಗಾರಿ ಕಛೇರಿಗೆ ಮಾಹಿತಿ ನೀಡತಕ್ಕದ್ದು.
2. ಕಟ್ಟಡ ನಕ್ಷೆ ಪರವಾನಿಗೆಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು (-----) ಉಪ ವಿಭಾಗ/ಸಹಾಯಕ ನಿರ್ದೇಶಕರು/ಜಂಟಿ ನಿರ್ದೇಶಕರು/ಅಪರ ನಿರ್ದೇಶಕರು ನಗರ ಯೋಜನೆ (---) ವಲಯ ಎಲ್‌ಪಿ ಸಂಖ್ಯೆ:-------- ದಿನಾಂಕ:------ ರಂತೆ ----- ವಲಯದ---ವಾರ್ಡ್‌ನ ಸ್ವತ್ತಿನ ಸಂಖ್ಯೆ:----- ರಲ್ಲಿ ------ ಮಹಡಿಗಳ ವಾಸದ/ವಾಣಿಜ್ಯ ಕಟ್ಟಡ ನಿರ್ಮಿಸಲು ಮಂಜೂರಾತಿ ನಕ್ಷೆ ಪಡೆದಿರುವುದನ್ನು ಪರಿಶೀಲಿಸಿರುವ ಬಗ್ಗೆ ಕಛೇರಿ ಕಡತದ ಟಿಪ್ಪಣಿಯಲ್ಲಿ ನಮೂದಿಸತಕ್ಕದ್ದು.
   ಕಟ್ಟಡ ಮಾಲೀಕರು ನೀಡಿದ ಮಾಹಿತಿ ಆಧಾರ ಅಥವಾ ದೂರಿನ ಮೇಲೆ ಅಥವಾ ಸ್ವಯಂ ಪ್ರೇರಣೆಯಿಂದ ಸ್ವತ್ತಿನ ಪರಿಶೀಲನೆ ಮಾಡಿದ ದಿನಾಂಕ ----- ಸಮಯ ----- ನಮೂದಿಸತಕ್ಕದ್ದು. ಕಟ್ಟಡದ ತಳಪಾಯ ಪರಿಶೀಲಿಸಿ, ಮಣ್ಣಿನ ಮಾದರಿಯನುಸಾರ ತಳಪಾಯ/ಫುಟಿಂಗ್ ಹಾಕಿರುವುದನ್ನು ಹಾಗೂ ಸೆಟ್‌ಬ್ಯಾಕ್ ಬಿಟ್ಟಿರುವುದನ್ನು ಪರಿಶೀಸಿಲಿಸಿದ ನಂತರ ನಿಯಮಾನುಸಾರ ಕ್ರಮಬದ್ದವಾಗಿದ್ದಲ್ಲಿ ಪ್ರಾರಂಭಿಕ ಪ್ರಮಾಣ ಪತ್ರ ನೀಡತಕ್ಕದ್ದು.
3. ಕಟ್ಟಡದ ಹಂತಗಳ ನಿರ್ಮಾಣವನ್ನು ಪರಿಶೀಲಿಸಿ ಕಡತದ ಟಿಪ್ಪಣಿಯಲ್ಲಿ ದಿನ ದಿನಾಂಕ ಮತ್ತು ಕಟ್ಟಡದ ಹಂತವನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಒಂದು ವೇಳೆ <u>ಪರಿಶೀಲನಾ ಸಮಯದಲ್ಲಿ ಮಂಜೂರಾತಿ ನಕ್ಷೆ ಉಲ್ಲಂಘನೆ ಕಂಡುಬಂದಲ್ಲಿ ವರದಿಯೊಂದಿಗೆ ಛಾಯಚಿತ್ರಗಳನ್ನು ಪಡೆಯುವುದು ಹಾಗೂ ಉಲ್ಲಂಘನೆ ಭಾಗವನ್ನು ಸರಿಪಡಿಸಿ ನಕ್ಷೆ ಮಂಜೂರಾತಿಯಂತೆ ಕಟ್ಟಡ ನಿರ್ಮಾಣ ಮಾಡಲು ಸೂಚಿಸುವುದು.</u>
4. ನಕ್ಷೆ ಮಂಜೂರಾತಿ ಉಲ್ಲಂಘನೆಯನ್ನು ಸರಿಪಡಿಸಿಕೊಳ್ಳದಿದ್ದಲ್ಲಿ ಕಟ್ಟಡವನ್ನು ಪರಿಶೀಲಿಸಿ ಕಟ್ಟಡದ ವ್ಯತಿರಿಕ್ತ ಭಾಗಗಳ ವಿವರಗಳುಳ್ಳ ಪಟ್ಟಿಯೊಂದಿಗೆ ಪರಿಶೀಲನಾ ವರದಿ ತಯಾರಿಸಿ ಮಹಜರ್ ಮಾಡುವುದು.
5. ಕ್ರಮ ಸಂಖ್ಯೆ 4ರಂತೆ ಕ್ರಮಕೈಗೊಂಡಿರುವ ಬಗ್ಗೆ ಸಂಪೂರ್ಣ ವರದಿಯನ್ನು ಕಛೇರಿಯಲ್ಲಿ ನಿರ್ವಹಿಸಿದ ಕಡತದಲ್ಲಿ ಸದರಿ ಉಲ್ಲಂಘನೆಯ ಬಗ್ಗೆ ಸ್ಪಷ್ಟವಾಗಿ ವಿವರಿಸಿ ಕೆಎಂಸಿ ಕಾಯ್ದೆ ಕಲಂ 321(1)ರಡಿ ತಾತ್ಕಾಲಿಕ ಆದೇಶವನ್ನು ಅನುಬಂಧ–2ರ ನಮೂನೆಯಂತೆ ಹೊರಡಿಸತಕ್ಕದ್ದು. ಸದರಿ ಆದೇಶದ ಪ್ರತಿಯನ್ನು ಪ್ರತ್ಯೇಕವಾಗಿ ಕೆಎಂಸಿ ಕಾಯ್ದೆ ಕಲಂ 321(2)ರೊಂದಿಗೆ ಅಂದರೆ ಕಲಂ (1)ರ ತಾತ್ಕಾಲಿಕ ಆದೇಶ ಹಾಗೂ ಕಲಂ 321(2)ರ ನೋಟೀಸು ಇವೆರಡನ್ನು ಒಟ್ಟಿಗೆ ಕಟ್ಟಡ ಮಾಲೀಕರಿಗೆ ಜಾರಿ ಮಾಡತಕ್ಕದ್ದು. (ಕೆಎಂಸಿ ಕಾಯ್ದೆ ಕಲಂ 321(1), (2) ಹಾಗೂ (3)ರ ನಮೂನೆಗಳನ್ನು ಲಗತ್ತಿಸಿದೆ)

ಆಯುಕ್ತರು
ಬೆಂಗಳೂರು ಮಹಾನಗರ ಪಾಲಿಕೆ

ಅನುಬಂಧ–2

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:

ಸಹಾಯಕ ಕಾರ್ಯನಿರ್ವಾಹಕ/ಕಾರ್ಯಪಾಲಕ
ಅಭಿಯಂತರರ ಕಛೇರಿ ---------
ದಿನಾಂಕ: ---------------

**ಕರ್ನಾಟಕ ಮುನ್ಸಿಪಾಲ್ ಕಾರ್ಪೋರೇಶನ್ ಕಾಯ್ದೆ 1976 ರ ಕಲಂ 321(1) ರ ಪ್ರಕಾರ ಹೊರಡಿಸಿರುವ ತಾತ್ಕಾಲಿಕ ಆದೇಶ**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ -------- ವಲಯದ ವಾರ್ಡ್ ಸಂಖ್ಯೆ:--------------- ಶ್ರೀ---- -------- ಆದ ತಾವು ತಮ್ಮ ನಿವೇಶನದಲ್ಲಿ ವಾಸದ ಕಟ್ಟಡ ನಿರ್ಮಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನೆ ವಿಭಾಗ -------------/ಸಹಾಯಕ ಕಾರ್ಯಪಾಲಕ ಅಭಿಯಂತರರು. -------- ಉಪವಿಭಾಗರವರಿಂದ ಎಲ್.ಪಿ. ಸಂಖ್ಯೆ:---------- ದಿನಾಂಕ:----------ರಂದು ಮಹಡಿ + -------- ಮಹಡಿಗೆ ವಸತಿ/ವಾಣಿಜ್ಯ/ಭಾಗಶಃ ವಾಣಿಜ್ಯ ಉದ್ದೇಶಕ್ಕಾಗಿ ನಕ್ಷೆ ಮಂಜೂರಾತಿ ಪಡೆದಿರುತ್ತೀರಿ.

ಸಹಾಯಕ ಅಭಿಯಂತರ ವರದಿ ಹಾಗೂ ನಿಮ್ಮ/ನಿಮ್ಮ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ನಡೆಸಿದ ಸ್ಥಳ ಪರಿಶೀಲನೆ ವರದಿ ಹಾಗೂ ಮಹಜರ್ ನಕ್ಷೆ ಪ್ರಕಾರ ಸ್ವತ್ತಿನ ಸಂಖ್ಯೆ:------------------ಇಲ್ಲಿ ತಾವು ನಿರ್ಮಿಸುತ್ತಿರುವ/ನಿರ್ಮಿಸಿರುವ ಕಟ್ಟಡವು ಮಂಜೂರಾದ ನಕ್ಷೆಗೆ ವ್ಯತಿರಿಕ್ತವಾಗಿ ಕರ್ನಾಟಕ ಮುನ್ಸಿಪಾಲ್ ಕಾರ್ಪೋರೇಶನ್ ಕಾಯ್ದೆ 1976 ರ ನಿಯಮ ಮತ್ತು ಬೈಲಾಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡುತ್ತಿರುವುದು ನಮಗೆ ಮನಃ ಪೂರ್ತಿಯಾಗಿ ದೃಢಪಟ್ಟಿರುತ್ತದೆ. ಹಾಗೂ ಮಂಜೂರಾತಿ ನಕ್ಷೆಗೆ ಸಂಬಂಧಿಸಿದಂತೆ ಕಟ್ಟಡ ನಿರ್ಮಾಣದಲ್ಲಿ ಕೆಳಗಿನ ವ್ಯತ್ಯಾಸಗಳು ಕಂಡುಬಂದಿರುತ್ತವೆ.

**ಮಂಜೂರಾತಿ ನಕ್ಷೆಯೊಂದಿಗೆ ಕಟ್ಟಡದ ವಾಸ್ತವ ಅಳತೆಗಳ ವ್ಯತ್ಯಾಸದ ವಿವರ**

| ವಿವರಗಳು | ಮಂಜೂರಾತಿ ನಕ್ಷೆ ಪ್ರಕಾರ (ಮೀ.ಗಳಲ್ಲಿ) | ಕಟ್ಟಡದ ವಾಸ್ತವ ಅಳತೆ (ಮೀ.ಗಳಲ್ಲಿ) | ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿರುವ ನಿರ್ಮಾಣ | ಶೇಕಡವಾರು ವ್ಯತಿರಿಕ್ತ ನಿರ್ಮಾಣ | ಷರಾ |
|---|---|---|---|---|---|
| **ನಡುಜಾಗ**<br>1) ಬಲಭಾಗ<br>2) ಎಡಭಾಗ<br>3) ಮುಂಭಾಗ<br>4) ಹಿಂಭಾಗ | | | | | |
| ನೆಲ ವಿಸ್ತೀರ್ಣ ಅನುಪಾತ (FAR) | | | | | |
| ಆವರಿಸುವಿಕೆ (Coverage) | | | | | |
| ಕಟ್ಟಡದ ಎತ್ತರ | | | | | |

(ಮಂಜೂರಾತಿ ನಕ್ಷೆಗೆ ವ್ಯತಿರಿಕ್ತ ಭಾಗಗಳನ್ನು ತೋರಿಸುವ ನಕ್ಷೆಯನ್ನು ಲಗತ್ತಿಸುವುದು)

ಇದರಿಂದ, ಕಟ್ಟಡದ ಮಾಲೀಕರು ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುತ್ತಾರೆ ಮತ್ತು ಕರ್ನಾಟಕ ಮುನ್ಸಿಪಾಲ್ ಕಾರ್ಪೋರೇಶನ್ ಕಾಯ್ದೆ 1976ರ ಅಡಿಯಲ್ಲಿ ರಚಿತವಾಗಿರುವ ನಿಯಾಮವಳಿಗಳನ್ನು ಉಲ್ಲಂಘಿಸಿರುವುದರಿಂದ,

ನಾನು ಈ ಕೆಳಕಂಡಂತೆ ತಾತ್ಕಾಲಿಕ ಆದೇಶ ಮಾಡಿರುತ್ತೇನೆ.

**<u>ತಾತ್ಕಾಲಿಕ ಆದೇಶ</u>**

ಮಾನ್ಯ ಆಯುಕ್ತರಿಂದ ಕೆ.ಎಂ.ಸಿ. ಕಾಯ್ದೆ ಅಡಿ ಅಧಿಕಾರ ಪ್ರತ್ಯಾಯೋಜನೆ ಹೊಂದಿದ ನಾನು ಮೇಲ್ಕಂಡ ಅಂಶ ಹಾಗೂ ವಿವರಗಳಿಂದ ------- ಸ್ವತ್ತಿನ ಕಟ್ಟಡದ ಮಾಲೀಕರಾದ ತಾವುಗಳು ಮಂಜೂರಾದ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಿಸುತ್ತಿರುತ್ತೀರಿ/ನಿರ್ಮಿಸಿರುತ್ತೀರಿ. ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ರ ನಿಯಮ ಮತ್ತು ಕಟ್ಟಡ ಉಪವಿಧಿಗಳನ್ನು ಉಲ್ಲಂಘಿಸಿ ನಿರ್ಮಾಣ ಮಾಡುತ್ತಿರುವ ಮೇಲಿನ ಕೋಷ್ಟಕದಲ್ಲಿನ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಿ ಕೆಎಂಸಿ ಕಾಯ್ದೆ ಹಾಗೂ ಅದರ ಅಡಿಯಲ್ಲಿ ರಚಿತವಾಗಿರುವ ನಿಯಮಾವಳಿ ಮತ್ತು ಬೈಲಾಗಳಿಗೆ ಒಳಪಡುವಂತೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡದ ಭಾಗಗಳನ್ನು ಕೂಡಲೇ ಕೆಡವಿಹಾಕಬೇಕೆಂದು ಆದೇಶಿಸಿದೆ.

ಈ ತಾತ್ಕಾಲಿಕ ಆದೇಶವನ್ನು ಪಾಲನೆ ಮಾಡುವವರೆಗೆ ಸದರಿ ಕಟ್ಟಡದ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಿ ಮುಂದುವರೆಸಬಾರದೆಂದು ನಿರ್ದೇಶಿಸಿದೆ.

**ಸಹಾಯಕ ಕಾರ್ಯಪಾಲಕ ಅಭಿಯಂತರರು,**
**( ) ಉಪ ವಿಭಾಗ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು.**

ಇವರಿಗೆ:–

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅನುಬಂಧ–3

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:

ಸಹಾಯಕ ಕಾರ್ಯನಿರ್ವಾಹಕ/ಕಾರ್ಯಪಾಲಕ
ಅಭಿಯಂತರರ ಕಛೇರಿ ---------
ದಿನಾಂಕ: ---------------

### ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ರ ಕಲಂ 321(2)ರ ಪ್ರಕಾರ ಹೊರಡಿಸಿದ ಕಾರಣ ಕೇಳುವ ನೋಟೀಸ್

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ---- ವಲಯದ ವಾರ್ಡ್ ಸಂಖ್ಯೆ: ---- ಸ್ವತ್ತಿನ/ಪಿ.ಐ.ಡಿ ಸಂಖ್ಯೆ: -------------- ಬೆಂಗಳೂರು, ಇಲ್ಲಿ ಸ್ವತ್ತಿನಲ್ಲಿ ಕಟ್ಟಡ ನಿರ್ಮಿಸಲು ಪಾಲಿಕೆಯಿಂದ ಕಟ್ಟಡ ನಕ್ಷೆ ಮಂಜೂರಾತಿಯನ್ನು ಸುವರ್ಣ ಪರವಾನಿಗೆ/ವಸತಿ/ವಾಣಿಜ್ಯ/ಭಾಗಶಃ ವಾಣಿಜ್ಯ/ವಸತಿ ಕಟ್ಟಡ ನಿರ್ಮಿಸಲು --------- ವಲಯ ನಗರ ಯೋಜನೆ ಕಛೇರಿ ಸಂಖ್ಯೆ: --------------------------, ದಿನಾಂಕ: ----------ರಂತೆ ------ ಮಹಡಿಯ ವಸತಿ/ವಾಣಿಜ್ಯ ಉದ್ದೇಶಕ್ಕಾಗಿ ನಕ್ಷೆ ಮಂಜೂರಾತಿ ಪಡೆದು ಕಟ್ಟಡ ನಿರ್ಮಿಸುತ್ತಿರುತ್ತೀರಿ.

ಮೇಲ್ಕಂಡಂತೆ ಕಟ್ಟಡ ನಕ್ಷೆ ಮಂಜೂರಾತಿ ಪಡೆದು ತಾವು ಸ್ವತ್ತಿನಲ್ಲಿ ಮಂಜೂರಾತಿ ನಕ್ಷೆ ಹಾಗೂ ಪಾಲಿಕೆಯ ಕಟ್ಟಡ ಉಪವಿಧಿಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿರುವುದು ಈ ಕಛೇರಿಯಿಂದ ದಿನಾಂಕ:-------- ರಂದು ನಡೆಸಿದ ಸ್ಥಳ ಪರಿವೀಕ್ಷಣೆ ಮತ್ತು ಕಟ್ಟಡದ ಅಳತೆಯಿಂದ ದೃಢಪಟ್ಟಂತೆ ಈ ಕಛೇರಿಯ ತಾತ್ಕಾಲಿಕ ಆದೇಶ ಸಂಖ್ಯೆ:---------- ದಿನಾಂಕ:----- ರಂದು ಹೊರಡಿಸಲಾಗಿದೆ. ಹಾಗೂ ಸದರಿ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಈ ಆದೇಶಕ್ಕನುಗುಣವಾಗಿ ನೀವು ಸದರಿ ಕಟ್ಟಡ ನಿರ್ಮಾಣದ ನಕ್ಷೆ ಉಲ್ಲಂಘಿಸಿ ನಿರ್ಮಿಸಿದ ಭಾಗಗಳನ್ನು ಹೊಡೆದು ಹಾಕಿ ಮಂಜೂರಾತಿ ನಕ್ಷೆಯಂತೆ ಸರಿಪಡಿಸಿ ವರದಿ ಮಾಡುವ ತನಕ ಮಂಜೂರಾತಿ ನಕ್ಷೆಯ ಹಾಗೂ ಕಟ್ಟಡ ಉಪವಿಧಿಗೆ ವಿರುದ್ಧವಾಗಿ ನಿರ್ಮಿಸುತ್ತಿರುವ ಕಟ್ಟಡದ ಕೆಲಸವನ್ನು ಈ ಆದೇಶ ಜಾರಿಯಾದ ತಕ್ಷಣವೇ ಸ್ಥಗಿತಗೊಳಿಸಬೇಕೆಂದು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಕಲಂ 321(1) ಹಾಗೂ 321(2)ರ ಪ್ರಕಾರ ಆದೇಶಿಸಿರುತ್ತೇನೆ.

ಮೇಲ್ಕಂಡ ತಾತ್ಕಾಲಿಕ ಆದೇಶವನ್ನು 7 ದಿನಗಳೊಳಗಾಗಿ ಪಾಲಿಸಲು ವಿಫಲರಾದಲ್ಲಿ ಅಥವಾ ಸೂಕ್ತ ದಾಖಲೆಗಳೊಂದಿಗೆ ತೃಪ್ತಿಕರವಾದ ಸಮಜಾಯಿಷಿ ನೀಡದಿರುವ ಪಕ್ಷದಲ್ಲಿ ಈ ತಾತ್ಕಾಲಿಕ ಆದೇಶವನ್ನು ಸದರಿ ಕಾಯ್ದೆ ಕಲಂ 321(3)ರಡಿಯಲ್ಲಿ ಸ್ಥಿರೀಕರಣಗೊಳಿಸಿ ಆದೇಶಿಸಲಾಗುವುದು. ಸದರಿ ಆದೇಶವನ್ನು ಜಾರಿಗೊಳಿಸಲು ಈ ಅಧಿನಿಯಮದ ಕಲಂ 462ರಂತೆ ಹಾಗೂ ಇತರೆ ಸೂಕ್ತ ಕಾನೂನಿನ ಅಂಶಗಳಂತೆ ನಿಮ್ಮ ವಿರುದ್ಧ ಕ್ರಮಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ ಹಾಗೂ ಈ ಬಗ್ಗೆ ಕೈಗೊಳ್ಳಲಾಗುವ ಯಾವುದೇ ಜಾರಿ ಕ್ರಮಗಳು ಖರ್ಚು ವೆಚ್ಚಗಳನ್ನು ಭರಿಸಲು ಸದರಿ ಕಾನೂನಿನ ಕಲಂ 463ರಂತೆ ನೀವೇ ಜವಾಬ್ದಾರರಾಗಿರುತ್ತೀರೆಂದು ಹಾಗೂ ನಿಮ್ಮಿಂದ ಸದರಿ ಖರ್ಚನ್ನು ವಸೂಲಿ ಮಾಡಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

**ಸಹಾಯಕ ಕಾರ್ಯಪಾಲಕ ಅಭಿಯಂತರರು.**

**1.ಸ್ವತ್ತಿನ ಮಾಲೀಕರ ಹೆಸರು ಮತ್ತು ವಿಳಾಸ**

**2.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ/ಕಾರ್ಯಪಾಲಕ

ಸಂಖ್ಯೆ: ಅಭಿಯಂತರರ ಕಛೇರಿ ---------

ಬೆಂಗಳೂರು, ದಿನಾಂಕ: -----------

## ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಕಲಂ 321(3)ರ ಪ್ರಕಾರ ಹೊರಡಿಸಿರುವ ಸ್ಥಿರೀಕರಣ ಆದೇಶ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ __________ ವಲಯದ ವಾರ್ಡ್ ಸಂಖ್ಯೆ: __________ ಸಂಖ್ಯೆ: ________________ಬೆಂಗಳೂರು, ಇಲ್ಲಿ ಶ್ರೀ __________ ಆದ ನೀವು ವಸತಿ/ವಾಣಿಜ್ಯ/ಭಾಗಶಃ ವಾಣಿಜ್ಯ/ವಸತಿ ಮನೆ ಕಟ್ಟುತ್ತಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಟ್ಟಡದ ಬೈಲಾಗಳು ಹಾಗೂ ಇತರ ನಿಯಮಗಳನ್ನು ಉಲ್ಲಂಘಸಿ ಕಟ್ಟಡ ಕಟ್ಟುತ್ತಿರುವ/ಕಟ್ಟಿರುವ ಬಗ್ಗೆ ನಿಮಗೆ ಈ ಕಛೇರಿಯ ತಾತ್ಕಾಲಿಕ ಆದೇಶ ಸಂಖ್ಯೆ:__________, ದಿನಾಂಕ: __________ ರಲ್ಲಿ ತಿಳಿಸಲಾಗಿದೆ ಹಾಗೂ ಸದರಿ ಆದೇಶದ ಪ್ರತಿಯನ್ನು ಕಾರಣ ಕೇಳುವ ನೋಟೀಸ್‌ನೊಂದಿಗೆ ಜಾರಿ ಮಾಡಲಾಗಿದೆ.

ಈ ತಾತ್ಕಾಲಿಕ ಆದೇಶಕ್ಕೆ ಅನುಗುಣವಾಗಿ ನೀವು ಸಮಜಾಯಿಷಿ ನೀಡಿರುವುದಿಲ್ಲ/ನೀಡಿದ ಸಮಜಾಯಿಷಿಯು ತೃಪ್ತಿದಾಯಕವಾಗಿರುವುದಿಲ್ಲ. ಆದುದರಿಂದ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ಮತ್ತು ನಿಯಮ ಹಾಗೂ ಬೈಲಾಗಳನ್ನು ಉಲ್ಲಂಘಿಸಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವುದು ಮನಃ ಪೂರ್ತಿಯಾಗಿ ದೃಡಪಟ್ಟಿರುತ್ತದೆ. ಆದುದರಿಂದ ತಾತ್ಕಾಲಿಕ ಆದೇಶವನ್ನು ಮರು ಆಲೋಚಿಲು ನಿರಾದಾರವಾಗಿದೆ ಎಂದು ಅಭಿಪ್ರಾಯದೊಂದಿಗೆ ಈ ಕೆಳಗೆ ಸಹಿ ಮಾಡಿರುವ ನಾನು ಈ ರೀತಿ ಆದೇಶ ಹೊರಡಿಸುತ್ತಿದ್ದೇನೆ.

## ಸ್ಥಿರೀಕರಣ ಆದೇಶ

ಮೇಲ್ಕಂಡ ಅಂಶ ಹಾಗೂ ವಿವರಗಳಿಂದ ಕಟ್ಟಡದ ಮಾಲೀಕರಾದ ಶ್ರೀ __________, ಸಂಖ್ಯೆ: __________, __________ ಬೆಂಗಳೂರು ಇಲ್ಲಿ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ರಂತೆ ನಿಯಮ ಮತ್ತು ಬೈಲಾಗಳನ್ನು ಉಲ್ಲಂಘಿಸಿ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಕಟ್ಟಡದ ಭಾಗಗಳನ್ನು ಒಡೆದು ಹಾಕಿ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಮತ್ತು ಅದರಡಿಯಲ್ಲಿ ರಚಿತವಾಗಿರುವ ನಿಯಮಾವಳಿಗಳಿಗೆ ವಿರುದ್ಧವಾಗಿ ನಿರ್ಮಿಸುತ್ತಿರುವ ಕಟ್ಟಡದ ಭಾಗಗಳನ್ನು ಕೂಡಲೇ ಕೆಡವಿ ಹಾಕಬೇಕೆಂದು ನಿರ್ದೇಶಿಸುತ್ತಾ, ಮಾನ್ಯ ಆಯುಕ್ತರಿಂದ ಕೆಎಂಸಿ ಕಾಯ್ದೆ ಅಡಿ ಅಧಿಕಾರ ಪ್ರತ್ಯಾಯೋಜನೆ ಹೊಂದಿದ ನಾನು ಅದರಂತೆ ದಿನಾಂಕ:____________ರ ತಾತ್ಕಾಲಿಕ ಆದೇಶವನ್ನು ಸ್ಥಿರೀಕರಣಗೊಳಿಸಲಾಗಿದೆ. ಈ ಆದೇಶಕ್ಕನುಗುಣವಾಗಿ ಉಲ್ಲಂಘನೆಗಳನ್ನು ಸರಿಪಡಿಸಿ ವರದಿ ಮಾಡುವ ತನಕ ಕಟ್ಟಡ ಉಪವಿಧಿಗೆ ವಿರುದ್ಧವಾಗಿ ಕಾನೂನು ಬಾಹಿರವಾಗಿ ಕಟ್ಟುತ್ತಿರುವ ಕಟ್ಟಡದ ಕೆಲಸವನ್ನು ಈ ಆದೇಶ ಜಾರಿಯಾದ ತಕ್ಷಣದಿಂದಲೇ ಸ್ಥಗಿತಗೊಳಿಸತಕ್ಕದೆಂದು ಆದೇಶಿಸಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು
( ) ಉಪ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅನುಬಂಧ-5

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:

ಸಹಾಯಕ ಕಾರ್ಯಪಾಲಕ ಅಭಿಯಂತರರು,
__________ ಉಪ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು, ದಿನಾಂಕ:

ಇವರಿಗೆ,

1. ಸಹಾಯಕ ಕಾರ್ಯಪಾಲಕ ಅಭಿಯಂತರರು,
   __________ ಉಪ ವಿಭಾಗ,
   ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
   ಕಾವೇರಿ ಭವನ

2. ಸಹಾಯಕ ಕಾರ್ಯಪಾಲಕ ಅಭಿಯಂತರರು,
   ____________ ಉಪ ವಿಭಾಗ,
   ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ,
   ಬೆಂಗಳೂರು.

**ಮಾನ್ಯರೇ,**

**ವಿಷಯ:-** ಕುಡಿಯುವ ನೀರು ಸಂಪರ್ಕ/ವಿದ್ಯುತ್ ಸರಬರಾಜು ಮಂಜೂರಾತಿಯನ್ನು ನೀಡದಿರಲು/ರದ್ದುಪಡಿಸುವ ಬಗ್ಗೆ.

**ಉಲ್ಲೇಖ:-** 1. ಈ ಕಛೇರಿ ಆದೇಶ ಸಂಖ್ಯೆ:_____ ದಿನಾಂಕ:______

2. ರಿಟ್ ಮೇಲ್ಮನವಿ ಸಂಖ್ಯೆ:1800/2008ರ ತೀರ್ಪು ದಿನಾಂಕ:01/12/2008.

********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:____ರ ಸ್ವತ್ತಿನ ಸಂಖ್ಯೆ ___ ರಲ್ಲಿ ಪಾಲಿಕೆಯ ಕಟ್ಟಡ ಉಪವಿಧಿ ಹಾಗೂ ಕಟ್ಟಡ ನಕ್ಷೆ ಮಂಜೂರಾತಿ ಉಲ್ಲಂಘಿಸಿ ಕಟ್ಟಡಗಳನ್ನು ನಿರ್ಮಿಸುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ ಪಾಲಿಕೆಯು ಕೆ.ಎಂ.ಸಿ ಕಾಯ್ದೆ ಕಲಂ 321ರಡಿಯಲ್ಲಿ ಉಲ್ಲೇಖ (1)ರ ತಾತ್ಕಾಲಿಕ ಆದೇಶ ಕಲಂ 321(3)ರಡಿ ಸ್ಥಿರೀಕರಣ ಆದೇಶ ಹೊರಡಿಸಲಾಗಿರುತ್ತದೆ. (ಪ್ರತಿಯನ್ನು ಲಗತ್ತಿಸಿದೆ)

ಕಟ್ಟಡ ಉಪವಿಧಿ ಉಲ್ಲಂಘಿಸಿರುವ ಕಟ್ಟಡಗಳಿಗೆ ಕುಡಿಯುವ ನೀರು ಹಾಗೂ ವಿದ್ಯುತ್ ಸಂಪರ್ಕವನ್ನು ನೀಡುವ ಬಗ್ಗೆ ಉಲ್ಲೇಖ (2)ರ ರಿಟ್ ಮೇಲ್ಮನವಿಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು **"In the circumstances, this Court is of the opinion, till the case is decided by the Karnataka Appellate Tribunal and till the occupancy certificate is obtained by the 2nd Respondent, the respondent No.3 and 4 shall not provide water and electicity to the 2nd respondent. On production of occupancy certificate by the 2nd respondent, 3rd and 4th respondent shall provide electricity and water connextion to the premises of the 2nd respondent. With the above observation, the writ petition is disposed of"** ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುತ್ತದೆ. ಆದ್ದರಿಂದ ಮೇಲ್ಕಂಡ ವಿಳಾಸದ ಕಟ್ಟಡಕ್ಕೆ ಕುಡಿಯುವ ನೀರಿನ/ವಿದ್ಯುತ್ ತಾತ್ಕಾಲಿಕ/ಖಾಯಂ ಸಂಪರ್ಕವನ್ನು ನೀಡಿದ್ದಲ್ಲಿ ಸ್ಥಗಿತಗೊಳಿಸಲು ಹಾಗೂ ಹೊಸದಾಗಿ ತಾತ್ಕಾಲಿಕ ಅಥವಾ ಖಾಯಂ ಸಂಪರ್ಕ ಮಂಜೂರಾತಿ ನೀಡದಿರಲು ಕೋರಿದೆ.

ಆದ್ದರಿಂದ ಮೇಲ್ಕಂಡ ಸ್ವತ್ತಿನಲ್ಲಿಯ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಹಾಗೂ ಕುಡಿಯುವ ನೀರು ಮತ್ತು ಒಳಚರಂಡಿ ತಾತ್ಕಾಲಿಕ/ಖಾಯಂ ಸಂಪರ್ಕಗಳನ್ನು ಸ್ಥಗಿತಗೊಳಿಸುವಂತೆ ಕೋರಿದೆ.

ಒಂದು ಪಕ್ಷ ಸಂಪರ್ಕ ಪಡೆಯಲು ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸುವ ಸಂದರ್ಭದಲ್ಲಿ ಪಾಲಿಕೆಯ ಸಂಬಂಧಪಟ್ಟ ಉಪವಿಭಾಗದ ಕಾಮಗಾರಿ ಕಛೇರಿಯಿಂದ ಕಟ್ಟಡ ಉಪವಿಧಿ ಉಲ್ಲಂಘನೆಗೆ ಸಂಬಂಧಿಸಿ ಪತ್ರವನ್ನು ಕಡ್ಡಾಯವಾಗಿ ಪರಿಗಣಿಸಿ ಅಪೇಕ್ಷಿಸುವ ಕ್ರಮದೊಂದಿಗೆ ಪಾಲಿಕೆ ವ್ಯಾಪ್ತಿಯಲ್ಲಿ ಕಾನೂನು ಬಾಹಿರವಾಗಿ ನಡೆಯುವ ಕಟ್ಟಡಗಳ ನಿರ್ಮಾಣಗಳನ್ನು ನಿಯಂತ್ರಿಸಲು ಪಾಲಿಕೆಯೊಂದಿಗೆ ಸಹಕರಿಸಲು ಈ ಮೂಲಕ ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು
_________ ಉಪ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಪ್ರತಿಯನ್ನು: ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರಿಗೆ ಮಾಹಿತಿಗಾಗಿ ಕಳುಹಿಸಿದೆ.
: ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅನುಬಂಧ - 6

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:

ಸಹಾಯಕ ಕಾರ್ಯನಿರ್ವಾಹಕ/ಕಾರ್ಯಪಾಲಕ

ಅಭಿಯಂತರರ ಕಛೇರಿ ---------

ದಿನಾಂಕ: ---------------

ರವರಿಗೆ:

01. ಕಟ್ಟಡ ನಕ್ಷೆಯ ನೋಂದಾಯಿತ ವಿನ್ಯಾಸಗಾರರು/ಸ್ಟ್ರಕ್ಚರಲ್ ಇಂಜಿನಿಯರ್ಸ್
02. ಕಟ್ಟಡ ನಿರ್ಮಾಣದ ನೋಂದಾಯಿತ ಅಭಿಯಂತರರ
03. ಕಟ್ಟಡ ನಿರ್ಮಾಣದ ಮೇಲ್ವಿಚಾರಕರು

**ತಿಳುವಳಿಕೆ ನೋಟಿಸ್–1**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ---- ವಲಯದ ವಾರ್ಡ್ ಸಂಖ್ಯೆ: ---- ಸ್ವತ್ತಿನ/ಪಿ.ಐ.ಡಿ ಸಂಖ್ಯೆ: -- ------------ ಬೆಂಗಳೂರು, ಇಲ್ಲಿ ಸ್ವತ್ತಿನಲ್ಲಿ ಕಟ್ಟಡ ನಿರ್ಮಿಸಲು ಪಾಲಿಕೆಯಿಂದ ಕಟ್ಟಡ ನಕ್ಷೆ ಮಂಜೂರಾತಿಯನ್ನು ಸುವರ್ಣ ಪರವಾನಿಗೆ/ವಸತಿ/ವಾಣಿಜ್ಯ/ಭಾಗಶಃ ವಾಣಿಜ್ಯ/ವಸತಿ ಕಟ್ಟಡ ನಿರ್ಮಿಸಲು --------- ವಲಯ ನಗರ ಯೋಜನೆ ಕಛೇರಿ ಸಂಖ್ಯೆ: --------------------------, ದಿನಾಂಕ: ----------ರಂತೆ ----- ಮಹಡಿಯ ವಸತಿ/ವಾಣಿಜ್ಯ ಉದ್ದೇಶಕ್ಕಾಗಿ ನಕ್ಷೆ ಮಂಜೂರಾತಿ ಪಡೆದು ಕಟ್ಟಡ ನಿರ್ಮಿಸಲಾಗುತ್ತಿದೆ.

ಮೇಲ್ಕಂಡಂತೆ ಕಟ್ಟಡ ನಕ್ಷೆ ಮಂಜೂರಾತಿ ಪಡೆದು ಸ್ವತ್ತಿನಲ್ಲಿ ಮಂಜೂರಾತಿ ನಕ್ಷೆ ಹಾಗೂ ಪಾಲಿಕೆಯ ಕಟ್ಟಡ ಉಪವಿಧಿಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿರುವುದು ಈ ಕಛೇರಿಯಿಂದ ದಿನಾಂಕ:-------- ರಂದು ನಡೆಸಿದ ಸ್ಥಳ ಪರಿವೀಕ್ಷಣೆ ಮತ್ತು ಕಟ್ಟಡದ ಅಳತೆಯಿಂದ ದೃಢಪಟ್ಟಂತೆ ಈ ಕಛೇರಿ ತಾತ್ಕಾಲಿಕ ಆದೇಶ ಸಂಖ್ಯೆ:------------ ದಿನಾಂಕ:----- – ರಂದು ತಾತ್ಕಾಲಿಕ ಆದೇಶ ಹೊರಡಿಸಲಾಗಿದೆ.

ಮೇಲ್ಕಂಡಂತೆ ಮಂಜೂರಾತಿ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡಿರುವುದು ಕೆ.ಎಂ.ಸಿ.ಕಾಯ್ದೆ ಹಾಗೂ ಅದರಿಂದ ರಚಿಸಲ್ಪ ಕಟ್ಟಡ ಉಪ ವಿಧಿಗಳಂತೆ ತಾವುಗಳು ಕಟ್ಟಡ ನಕ್ಷೆ ಮಂಜೂರಾತಿ ಪಡೆಯುವಾಗ ಪಾಲಿಕೆಗೆ ನೀಡಿರುವ ಪ್ರಮಾಣ ಪತ್ರದ ವಾಗ್ದಾನವನ್ನು ಉಲ್ಲಂಘಿಸಿದ್ದೀರಿ. ಕಟ್ಟಡ ಉಪವಿಧಿ ನಿಯಮ 8(i)ರ ಪ್ರಕಾರ ನೀವೂ ಜವಾಬ್ದಾರರು.

ಆದ್ದರಿಂದ ಕೆ.ಎಂ.ಸಿ. ಕಾಯ್ದೆ ಅಡಿ ರಚಿಸಲಾದ ಕಟ್ಟಡ ಉಪವಿಧಿ 7.1ರ ಪ್ರಕಾರ ನಿಮಗೆ ಈ ಮೂಲಕ ತಿಳುವಳಿಕೆ ನೀಡಿದೆ. ನೀವು ಮಂಜೂರಾತಿ ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಾಣವನ್ನು ಕೂಡಲೇ ತೆರವುಗೊಳಿಸಲು ಕಟ್ಟಡದ ಮಾಲೀಕರಿಗೆ ಸೂಚಿಸುವುದು.

ಮೇಲ್ಕಂಡ ತಿಳುವಳಿಕೆ ನೋಟಿಸ್ ತಲುಪಿದ 3 ದಿನಗಳೊಳಗಾಗಿ ಕ್ರಮಜರುಗಿಸುವುದು. ತಪ್ಪಿದಲ್ಲಿ ಕಟ್ಟಡ ಉಪವಿಧಿ 7.1ರ ಪ್ರಕಾರ ಮುಂದಿನ ಸೂಕ್ತ ಕ್ರಮಜರುಗಿಸಲಾಗುವುದೆಂದು ತಿಳಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರು.

ಅನುಬಂಧ-7

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ/ಕಾರ್ಯಪಾಲಕ

ಸಂಖ್ಯೆ:

ಅಭಿಯಂತರರ ಕಛೇರಿ ---------

ದಿನಾಂಕ: ---------------

ರವರಿಗೆ:

01. ಕಟ್ಟಡ ನಕ್ಷೆಯ ನೋಂದಾಯಿತ ವಿನ್ಯಾಸಗಾರರು/ಸ್ಟ್ರಕ್ಚರಲ್ ಇಂಜಿನಿಯರ್ಸ್
02. ಕಟ್ಟಡ ನಿರ್ಮಾಣದ ನೋಂದಾಯಿತ ಅಭಿಯಂತರರ
03. ಕಟ್ಟಡ ನಿರ್ಮಾಣದ ಮೇಲ್ವಿಚಾರಕರು

## ಎಚ್ಚರಿಕೆ ನೋಟಿಸ್ – 2

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ---- ವಲಯದ ವಾರ್ಡ್ ಸಂಖ್ಯೆ: ----- ಸ್ವತ್ತಿನ/ಪಿ.ಐ.ಡಿ ಸಂಖ್ಯೆ: ---------- ಬೆಂಗಳೂರು, ಇಲ್ಲಿ ಸ್ವತ್ತಿನಲ್ಲಿ ಕಟ್ಟಡ ನಿರ್ಮಿಸಲು ಪಾಲಿಕೆಯಿಂದ ಕಟ್ಟಡ ನಕ್ಷೆ ಮಂಜೂರಾತಿಯನ್ನು ಸುವರ್ಣ ಪರವಾನಿಗೆ/ವಸತಿ/ವಾಣಿಜ್ಯ/ಭಾಗಶಃ ವಾಣಿಜ್ಯ/ವಸತಿ ಕಟ್ಟಡ ನಿರ್ಮಿಸಲು -------- ವಲಯ ನಗರ ಯೋಜನೆ ಕಛೇರಿ ಸಂಖ್ಯೆ: --------------------, ದಿನಾಂಕ: -------- ರಂತೆ -------- ಮಹಡಿಯ ವಸತಿ/ವಾಣಿಜ್ಯ ಉದ್ದೇಶಕ್ಕಾಗಿ ನಕ್ಷೆ ಮಂಜೂರಾತಿ ಪಡೆದು ಸ್ವತ್ತಿನಲ್ಲಿ ಸ್ವತ್ತಿನಲ್ಲಿ ಮಂಜೂರಾತಿ ನಕ್ಷೆ ಹಾಗೂ ಪಾಲಿಕೆಯ ಕಟ್ಟಡ ಉಪವಿಧಿಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿರುವುದು ದೃಢಪಟ್ಟಿದ್ದು, ಈ ಕಛೇರಿ ಆದೇಶ ಸಂಖ್ಯೆ:--------- ದಿನಾಂಕ:------- ರಂದು ತಾತ್ಕಾಲಿಕ ಆದೇಶ ಹೊರಡಿಸಲಾಗಿರುತ್ತದೆ.

ಮಂಜೂರಾತಿ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡಿರುವುದು ಕೆ.ಎಂ.ಸಿ.ಕಾಯ್ದೆ ಹಾಗೂ ಅದರಿಂದ ರಚಿಸಲ್ಪಟ್ಟ ಕಟ್ಟಡ ಉಪ ವಿಧಿಗಳಂತೆ ಕಟ್ಟಡ ನಕ್ಷೆ ಮಂಜೂರಾತಿ ಪಡೆಯುವಾಗ ಪಾಲಿಕೆಗೆ ನೀಡಿರುವ ಪ್ರಮಾಣ ಪತ್ರದ ವಾಗ್ದಾನವನ್ನು ಉಲ್ಲಂಘಿಸಿದ್ದು, ಕಟ್ಟಡ ಉಪವಿಧಿ ನಿಯಮದ ಷೆಡ್ಯೂಲ್ iv-8ರ ಉಲ್ಲಂಘನೆಯಾಗಿರುವ ಬಗ್ಗೆ ಈ ಕಛೇರಿಯ ತಿಳುವಳಿಕೆ ನೋಟೀಸ್–1 ಸಂಖ್ಯೆ: ------- ದಿನಾಂಕ ------ ರಂತೆ ಜಾರಿ ಮಾಡಲಾಗಿರುತ್ತದೆ. ಇದರಲ್ಲಿ ನಿಮ್ಮನ್ನು ಮಂಜೂರಾತಿ ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಾಣವನ್ನು ಕೂಡಲೇ ತೆರವುಗೊಳಿಸಲು ಕಟ್ಟಡದ ಮಾಲೀಕರಿಗೆ ಸೂಚಿಸಲು ಮತ್ತು ತೆರವುಗೊಳಿಸುವುದನ್ನು ಖಾತ್ರಿಪಡಿಸಿಕೊಳ್ಳಲು ತಿಳಿಸಲಾಗಿತ್ತು.

ಮೇಲ್ಕಂಡ ತಿಳುವಳಿಕೆ ನೋಟಿಸ್ ತಲುಪಿದರೂ ಕೂಡ ಇದುವರೆಗೂ ಮೇಲ್ಕಂಡ ಉಲ್ಲಂಘನೆಯನ್ನು ಸರಿಪಡಿಸಿರುವುದು ಕಂಡುಬಂದಿರುವುದಿಲ್ಲ. ಆದ್ದರಿಂದ ಈ ನೋಟೀಸು ತಲುಪಿದ 3 ದಿನಗಳೊಳಗಾಗಿ ಕಟ್ಟಡದ ವ್ಯತಿರಿಕ್ತ ನಿರ್ಮಾಣದ ಭಾಗಗಳನ್ನು ಮಾಲೀಕರಿಂದ ತೆರವುಗೊಳಿಸತಕ್ಕದ್ದುದು. ತಪ್ಪಿದಲ್ಲಿ ನಿಮ್ಮಗಳ ವಿರುದ್ಧ ಕಟ್ಟಡ ಉಪವಿಧಿ 7.1ರ ಪ್ರಕಾರ ಸೂಕ್ತ ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ಎಚ್ಚರಿಕೆ ನೀಡಲಾಗಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅನುಬಂಧ-8

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:

ಸಹಾಯಕ ಕಾರ್ಯನಿರ್ವಾಹಕ/ಕಾರ್ಯಪಾಲಕ
ಅಭಿಯಂತರರು ಅಭಿಯಂತರರ ಕಛೇರಿ__________,
ದಿನಾಂಕ:__________

ರವರಿಗೆ,

ಮಾನ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

### ಕಟ್ಟಡ ನಕ್ಷೆ ವಿನ್ಯಾಸ/ನಿರ್ಮಾಣ/ಮೇಲ್ವಿಚಾರಕರ ನೋಂದಣಿ ರದ್ದತಿಗೆ ಪ್ರಸ್ತಾವನೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ __________ ವಲಯದ ವಾರ್ಡ್ ಸಂಖ್ಯೆ:_____ ಸ್ವತ್ತಿನ/ಪಿ.ಐ.ಡಿ ಸಂಖ್ಯೆ:_________ ಬೆಂಗಳೂರು ಸ್ವತ್ತಿನಲ್ಲಿ ಕಟ್ಟಡ ನಿರ್ಮಿಸಲು ಪಾಲಿಕೆಯಿಂದ ಕಟ್ಟಡ ನಕ್ಷೆ ಮಂಜೂರಾತಿಯನ್ನು ಸುವರ್ಣ ಪರವಾನಿಗೆ/ವಸತಿ/ವಾಣಿಜ್ಯ/ಭಾಗಶಃ ವಾಣಿಜ್ಯ/ವಸತಿ ಕಟ್ಟಡ ನಿರ್ಮಿಸಲು ______________ ವಲಯ ನಗರ ಯೋಜನೆ ಕಛೇರಿ ಸಂಖ್ಯೆ:__________________, ದಿನಾಂಕ:______ ರಂತೆ _____ ಮಹಡಿಯ ವಸತಿ/ವಾಣಿಜ್ಯ ಉದ್ದೇಶಕ್ಕಾಗಿ ನಕ್ಷೆ ಮಂಜೂರಾತಿ ಪಡೆದು, ಸ್ವತ್ತಿನಲ್ಲಿ ಮಂಜೂರಾತಿ ನಕ್ಷೆ ಹಾಗೂ ಪಾಲಿಕೆಯ ಕಟ್ಟಡ ಉಪವಿಧಿಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿರುವುದು ದೃಢಪಟ್ಟಿದ್ದು ಈ ಕಛೇರಿ ಆದೇಶ ಸಂಖ್ಯೆ: ______________ ದಿನಾಂಕ:_________ ರಂದು ತಾತ್ಕಾಲಿಕ ಆದೇಶ ಹೊರಡಿಸಲಾಗಿರುತ್ತದೆ.

ಮಂಜೂರಾತಿ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡಿರುವ ಕುರಿತು 1) ಕಟ್ಟಡ ನಕ್ಷೆಯ ನೊಂದಾಯಿತ ವಿನ್ಯಾಸಗಾರರು/ಸ್ಟ್ರಕ್ಚರಲ್ ಇಂಜಿನಿಯರ್/ಸಂಸ್ಥೆ__________ 2) ಕಟ್ಟಡ ನಿರ್ಮಾಣದ ನೊಂದಾಯಿತ(ಗುತ್ತಿಗೆದಾರರ) ಅಭಿಯಂತರರು ಶ್ರೀ_________ 3)ಕಟ್ಟಡ ನಿರ್ಮಾಣದ ಮೇಲ್ವಿಚಾರಕರಾದ ಶ್ರೀ. __________ ರವರಿಗೆ ಈ ಕಛೇರಿಯ ತಿಳುವಳಿಕೆ ನೋಟೀಸು-1 ಸಂಖ್ಯೆ:_______ ದಿನಾಂಕ:_______ ಹಾಗೂ ಎಚ್ಚರಿಕೆ ನೋಟೀಸ್ ಸಂಖ್ಯೆ:_______ದಿನಾಂಕ:_______ ರಂತೆ ನೋಟೀಸು ಜಾರಿ ಮಾಡಲಾಗಿದೆ.

ಆದರೆ ಸದರಿ ಕಟ್ಟಡದ ವ್ಯತಿರಿಕ್ತ ನಿರ್ಮಾಣದ ಭಾಗಗಳನ್ನು ತೆರವುಗೊಳಿಸಿ ಮಂಜೂರಾತಿ ನಕ್ಷೆಯಂತೆ ಕಟ್ಟಡ ನಿರ್ಮಿಸಲು ವಿಫಲರಾಗಿರುವುದಲ್ಲದೆ ಕೆ.ಎಂ.ಸಿ ಕಾಯ್ದೆ ಹಾಗೂ ಅದರಿಂದ ರಚಿಸಲ್ಪಟ್ಟ ಕಟ್ಟಡ ಉಪವಿಧಿಗಳಂತೆ ಕಟ್ಟಡ ನಕ್ಷೆ ಮಂಜೂರಾತಿ ಪಡೆಯುವಾಗ ಪಾಲಿಕೆಗೆ ನೀಡಿರುವ ಪ್ರಮಾಣ ಪತ್ರದ ವಾಗ್ದಾನವನ್ನು ಉಲ್ಲಂಘಿಸಿರುವುದರಿಂದ ಸದರಿಯವರಿಗೆ ಪಾಲಿಕೆಯು ನೀಡಿದ ನೋಂದಾಯಿತ ಪರವಾನಗಿಯನ್ನು ರದ್ದುಪಡಿಸಲು ಕೋರಿದೆ.

**ಸಹಾಯಕ ಕಾರ್ಯಪಾಲಕ ಅಭಿಯಂತರರು**